28.	ಸಹಿ ಪ್ರಾ ಶಾಲೆ	ಹಾತೂರು
29.	ಸಹಿ ಪ್ರಾ ಶಾಲೆ	ಹೊಯ್ಸಳಲು
30.	ಸಹಿ ಪ್ರಾ ಶಾಲೆ	ನಿಡಗೋಡು
31.	ಸಹಿ ಪ್ರಾ ಶಾಲೆ	ಕಸ್ಕಹಳ್ಳಿ
32.	ಸಹಿ ಪ್ರಾ ಶಾಲೆ	ಹಾರ್ಮಕ್ಕೆ
33.	ಸಹಿ ಪ್ರಾ ಶಾಲೆ	ಹನುಮನ ಹಳ್ಳಿ

ನಂದಾಪುರ

34.	ಸಹಿ ಪ್ರಾ ಶಾಲೆ	ಹಳುವಳ್ಳಿ
35.	ಸಹಿ ಪ್ರಾ ಶಾಲೆ	ಸೇತೂರು
36.	ಸಹಿ ಪ್ರಾ ಶಾಲೆ	ಕೆಳಕೊಪ್ಪ
37.	ಸಹಿ ಪ್ರಾ ಶಾಲೆ	ಯಡವಾಳು

ಕೊಪ್ಪ

38.	ಸಹಿ ಪ್ರಾ ಶಾಲೆ	ಕೋಡೂರು
39.	ಸಹಿ ಪ್ರಾ ಶಾಲೆ	ಬೈರೇದೇವರು
40.	ಸಹಿ ಪ್ರಾ ಶಾಲೆ	ಬೊಮ್ಮಾಪುರ
41.	ಸಹಿ ಪ್ರಾ ಶಾಲೆ	ಕಮ್ಮರಡಿ
42.	ಸಹಿ ಪ್ರಾ ಶಾಲೆ	ಕೊಪ್ಪ
43.	ಸಹಿ ಪ್ರಾ ಶಾಲೆ	ಕಿರುಗುಂಡ.

ತರೀಕೆರೆ ತಾಲ್ಲೂಕಿನ ಹಾದಿಕೇರಿಯಲ್ಲಿ ಪ್ರೌಢಶಾಲೆ

4655 - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಹಾದಿಕೇರಿಯಲ್ಲಿ ಪ್ರೌಢಶಾಲೆ ಮಂಜೂರಾಗಿ ಎಷ್ಟು ವರ್ಷವಾಯಿತು ?

ಆ) ಈ ಶಾಲೆಗೆ ಸ್ಥಿರ ಕಟ್ಟಡ ಯಾವಾಗ ನಿರ್ಮಾಣ ಮಾಡಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಎರಡು ವರ್ಷಗಳಾಗಿದೆ.

ಆ) ಸ್ಥಳೀಯ ನಿಧಿಯಿಂದ ಸಂಗ್ರಹಿಸಿರುವ ರೂ. 110000 ರಲ್ಲಿ ಒಂದು ಕೊಠಡಿಯನ್ನು ಪ್ರಸಕ್ತ ಸಾಲಿನಲ್ಲಿ ನಿರ್ಮಿಸಬಹುದಾಗಿದೆ. ಉಳಿದ ಕಟ್ಟಡದ ನಿರ್ಮಾಣ ಕಾರ್ಯವನ್ನು ಮುಂಬರುವ ರಾಜ್ಯವಲಯ ಯೋಜನೆಯಡಿಯಲ್ಲಿ ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ಸರ್ಕಾರಿ ಪ್ರೌಢಶಾಲೆಗಳ ಪ್ರಾರಂಭ

4656 - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000-01ನೇ ಸಾಲಿನಲ್ಲಿ ಸರ್ಕಾರದಿಂದ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ನಿಗಧಿಪಡಿಸಿರುವ ಸಂಖ್ಯೆ ಎಷ್ಟು?

ಆ) ಸದರಿ ಶಾಲೆಗಳನ್ನು ಪ್ರಾರಂಭಿಸಲು ಚಿಕ್ಕಮಗಳೂರು ಜಿಲ್ಲೆಯಿಂದ ಬಂದಿರುವ ಪ್ರಸ್ತಾವನೆಗಳೆಷ್ಟು?

ಇ) ತರೀಕೆರೆ ತಾಲ್ಲೂಕಿನಲ್ಲಿ ಕರುಕುಚ್ಚ ಮತ್ತು ಬಗ್ಗವಳ್ಳಿಯಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಪ್ರಸ್ತಾವನೆಗಳು ಬಂದಿದೆಯೇ?

ಈ) ಲಕ್ಕವಳ್ಳಿಯಲ್ಲಿ ಬಾಲಕಿಯರ ಪ್ರೌಢಶಾಲೆ ಪ್ರಾರಂಭ ಮಾಡಲು ಬೇಡಿಕೆ ಇದ್ದು, ಆ ಶಾಲೆಯನ್ನು ಪ್ರಾರಂಭಮಾಡಲು ಅನುಮತಿ ನೀಡಲಾಗುವುದೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) 2000-01ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಆಯವ್ಯಯವನ್ನು ಒದಗಿಸಿರುವುದಿಲ್ಲ. ಆದ್ದರಿಂದ ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಸಂಖ್ಯೆಯನ್ನು ನಿಗದಿಪಡಿಸಿರುವುದಿಲ್ಲ.

ಆ) ೧೩ ಪ್ರಸ್ತಾವನೆಗಳು.

ಇ) ಬಂದಿದೆ.

ಈ) 2000-01ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆಗಳ ಮಂಜೂರಾತಿಗಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸದೇ ಇರುವುದರಿಂದ ಸರ್ಕಾರಿ ಪ್ರೌಢಶಾಲೆಯನ್ನು ಮಂಜೂರು ಮಾಡಿರುವುದಿಲ್ಲ.